ನಿಂದ ಎಫೆಕ್ಟ್ ಆಗುತ್ತದೆಯೇ ಎನ್ನುವುದನ್ನು ಸಹ ಗಮನದಲ್ಲಿಟ್ಟುಕೊಂಡು ನಾವು ಫರ್ದರ್ ಇನ್‌ವೆಸ್ಟಿಗೇಷನ್ ಮಾಡಬೇಕಾಗಿದೆ ಆದುದರಿಂದ ಈ ಯೋಜನೆಯ ಬಗ್ಗೆ ನಿರ್ದಿಷ್ಟವಾಗಿ ಇಂಥಾ ಅವಧಿಗೇ ಮುಗಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ.ಕೆ. ಕಾಳೆ.—ಆದ್ಯತೆ ಹಾಗೂ ಅವಶ್ಯಕತೆಗಳ ಮೇರೆಗೆ ಈ ಯೋಜನೆಗೆ ಹಣವನ್ನು ಒದಗಿಸಲಾಗುವುದೆಂದು ಉತ್ತರದಲ್ಲಿ ಹೇಳಿದ್ದೀರಿ. ಇವತ್ತು ಈ ಯೋಜನೆಯಿಂದ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ತೊಂದರೆಯಾಗುತ್ತದೆಯೇ ಇಲ್ಲವೇ ಎಂಬುದನ್ನು ತಿಳಿಸಬೇಕು, ಮತ್ತು ಈ ಯೋಜನೆಯನ್ನು ಮಾಡಿ ಮುಗಿಸಿದಾದ ಮೇಲೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿಯ ವಾಟರ್ ಲೆವೆಲ್‌ನಲ್ಲಿ ಏನಾದರೂ ಬದಲಾವಣೆಯಾಗುತ್ತದೆಯೇ ಎಂಬುದನ್ನು ಸಹ ತಿಳಿಸಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಆದನ್ನೇ ನಾನು ಉತ್ತರದಲ್ಲಿ ಹೇಳಿದ್ದೇನೆ. ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಇನ್ನೂ ಅಂತಿಮ ತೀರ್ಮಾನವಾಗಿಲ್ಲ. ಈ ಯೋಜನೆಗೆ ಯಾವುದೇ ವಿಧವಾದ ತೊಂದರೆ ಯಾಗದಂತೆ ಕೆಲಸ ಮಾಡಬೇಕೆಂದು ಮಾನ್ಯ ಸದಸ್ಯರೇನು ಅಭಿಪ್ರಾಯಿಸಿದ್ದಾರೆ ಅದೇ ರೀತಿ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಗಂಗಣ್ಣ.—ಐವರು ಗಂಡಂದಿರನ್ನು ಪಡೆದ ದ್ರೌಪದಿಯ ಹಣೆಬರಹ ಈ ಆಣೆಕಟ್ಟಿಗಾಗಿದೆ. ಈ ಆಣೆಕಟ್ಟಿನ ಪರಿಸ್ಥಿತಿಯ ಬಗ್ಗೆ ಪತ್ರಿಕೆಗಳು ವರದಿ ನೀಡಿವೆ. ಆ ಬಗ್ಗೆ ತಾವು ಕೈಗೊಂಡ ಕ್ರಮ ಏನು ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಕೆಲಸ ಸ್ಥಗಿತಗೊಂಡಿದೆ ಎಂಬುದು ಶುದ್ಧ ತಪ್ಪು. ಕೆಲಸ ನಡೆಯುತ್ತಿದೆ ಮತ್ತು ಆದಕ್ಕೆ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಎಸ್.ಎಸ್. ಅರಕೇರಿ.— ಕೆಲಸ ನಿಧಾನವಾಗಿ ಸಾಗಿದೆ ಅಂದರೆ ಇಲ್ಲಿವೆಂದು ಹೇಳುತ್ತೀರಿ ಎರಡನೆಯದಾಗಿ ಹಾಗಾದರೆ ಈ ವರ್ಷದಿಂದ ಹೆಚ್ಚಿಗೆ ಹಣ ಕೊಡುತ್ತೇವೆಂದು ಹೇಳಂತಿದ್ದೀರಿ. ಅಲಮಟ್ಟ ಮತ್ತು ಹಿಪ್ಪರಗಿ ಯೋಜನೆಗಳಿಗೆ ಬೇರೆ ಬೇರೆಯಾಗಿ ಹಣವನ್ನು ಕೊಡಬೇಕಾಗುತ್ತದೆ. ಆದರೆ ನೀವು ಹೇಳುವ ಮಾತನ್ನು ನೋಡಿದರೆ ಇದರ ಬಗ್ಗೆ ಒಂದು ವಿಚಿತ್ರವಾದ ನಿಲುವನ್ನು ಸರ್ಕಾರ ತಳೆದಿಲ್ಲ ಅನ್ನಿಸುತ್ತದೆ. ಹಾಗಾದರೆ ಹೆಚ್ಚಿಗೆ ದುಡ್ಡು ಕೊಡುತ್ತೇವೆಂಬುದು ವಿರೋಧಾಭಾಸವಾಗುವುದಿಲ್ಲವೆ ? ನಿಮ್ಮ ಈ ಮಾತಿನ ಪ್ರಕಾರ ೧೯೮೨-೮೩ಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೀರಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಿರ್ದಿಷ್ಟವಾಗಿ ಇಷ್ಟೇ ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ.ವಿ. ಪತ್ತಾರ್.—ನಮ್ಮಲ್ಲಿ ಜನಗಳು ಮಾತನಾಡುವುದು ಸರ್ವೇಸಾಧಾರಣವಾಗಿದೆ. ಈ ಯೋಜನೆಯನ್ನು ಸಂಪೂರ್ಣವಾಗಿ ಕೈಬಿಡಬೇಕೆಂದು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತಿದ್ದಾರೆ. ಈ ದಿಸೆಯಲ್ಲಿ ಬಾಳೆಕುಂದರಗಿಯವರ ಕಡೆಯಿಂದ ವರದಿ ಬಂದಿದೆಯೇ ? ಸರ್ಕಾರ ಈ ಕೆಲಸವನ್ನು ಕೈಬಿಡುವ ಸ್ಥಿತಿಯಲ್ಲಿದೆ ಎಂದು ತಿಳಿದುಬಂದಿದೆ. ಆದ್ದರಿಂದ, ಇದರ ಸತ್ಯಾಸತ್ಯತೆ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸರ್ಕಾರ ಅದರ ಬಗ್ಗೆ ಇನ್ನು ಯಾವುದೇ ರೀತಿಯ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಉಪ ಸಮಿತಿಯ ವರದಿ ಕೂಡ ಬಂದಿಲ್ಲ. ಅದನ್ನು ಕೈಬಿಡಬೇಕೇ ಬೇಡವೇ ಎಂಬ ವಿಚಾರವನ್ನು ಸಹ ಚರ್ಚೆ ಮಾಡಿಲ್ಲ. ಮಾನ್ಯ ಸದಸ್ಯರ ವಿಚಾರವನ್ನು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತಿಳಿಸುತ್ತೇನೆ.

Acquisition of land for the Construction of Airport at Bijapur

84 SRI S. S. ARAKERI (Balloli).—Will the Minister for Public Works be please to state—

(a) the total area required for the proposed Bijapur Airport, surveyed between Bhutanal Tank and Arakeri Village in Bijapur Taluka:

(b) the total estimated cost of this proposed Bijapur Airport.

(c) whether State Government has moved the Government of India for construction of this Airport, if so, furnish the latest position?

SRI KAGODU THIMMAPPA (Minister for Public works).—

(a) An extent of 6000' x 2000' of land is required.

(b) Preparation of estimates would be taken up only after receipt of approval by Government of India for development of this airport.

(c) The Government of india have been addressed to include Bijapur on the Vayudut routes.

ಶ್ರೀ ಎಸ್. ಎಸ್. ಅರಕೇರಿ.—ಬಿಜಾಪುರದಲ್ಲಿ ವಿಮಾನ ನಿಲ್ದಾಣ ಆಗಬೇಕೆಂದು ನಾನು ಕಳೆದ ೧೫ ವರ್ಷಗಳಿಂದ ಕೇಳುತ್ತಲೇ ಬಂದಿದ್ದೇನೆ ಮತ್ತು ನೀವು ಅದಕ್ಕೆ ಸರ್ವೆ ಆಗಿದೆ ಎಂದು ಹೇಳುತ್ತಲೇ ಬಂದಿದ್ದೀರಿ. ಅದಕ್ಕೆ ಯಾವ ಜಮೀನು ಸೂಕ್ತ ಎಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಒಂದು ಸಾರಿ ಬಂದು ನೋಡಿದ್ದಾರೆ. ಹಿಂದೆ ನಾವು ನೋಡಿದ್ದ ಸೈಟು ಸರಿಯಿಲ್ಲವೆಂದು ಅವರು ಅಭಿಪ್ರಾಯಿಸಿದ ಮೇಲೆ ನಾವು ಬೇರೆ ಸೈಟನ್ನು ಹುಡುಕಿದ್ದೇವಿ. ಇನ್ನೂ ನಿರ್ದಿಷ್ಟವಾಗಿಯೂ ಸೈಟು ಎಂದು ತೀರ್ಮಾನ ಮಾಡಿಲ್ಲ. ಹಿಂದೆ ನಾವು ತೋರಿಸಿದ ಸ್ಥಳ ಸಾಕಾಗುವುದಿಲ್ಲವೆಂದು ಹೇಳಿದ ಕಾರಣಕ್ಕಾಗಿ ಅದನ್ನು ಅಲ್ಲೇ ಬಿಟ್ಟಿದ್ದೇವೆ. ಜಾಗ ಇಂಥದ್ದು ಎಂಬುದು ತೀರ್ಮಾನವಾಗದೆ ಇರುವುದರಿಂದ ಅದನ್ನು ಅಭಿವೃದ್ಧಿಪಡಿಸುವ ಪ್ರಶ್ನೆ ಬರುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—೧೯೬೦ರಲ್ಲಿ ಪ್ರಶ್ನೆ ಕೇಳಿದಾಗ ಬಿಜಾಪುರ ತಾಲ್ಲೂಕಿನಲ್ಲಿರುವ ಎರಡು ಸೈಟುಗಳನ್ನು ಸರ್ವೆ ಮಾಡಿ ಅದರಲ್ಲಿ ಅರಕೇರಿ ಸೈಟು ಚನ್ನಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಮತ್ತೆ ಏಕೆ ಸಂಶಯ ಬರುತ್ತಿದೆ?

ಶ್ರೀ ಕಾಗೋಡು ತಿಮ್ಮಪ್ಪ.—ಬದಲಿ ಸೈಟನ್ನು ಇನ್ನೂ ಆಯ್ಕೆ ಮಾಡಿಲ್ಲ. ಅವರು ಇನ್ಸ್‌ಪೆಕ್ಷನ್ ಮಾಡಿದ್ದಾರೆಯೇ ವಿನಹ ಸೈಟನ್ನು ಆಯ್ಕೆ ಮಾಡಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಸರ್ವೆ ಮಾಡಿದ್ದೇವೆ ಅಂದಮೇಲೆ ಆಯ್ಕೆ ಮಾಡಿದಂತಾಗಲಿಲ್ಲವೆ ಬಿಜಾಪುರ ಅಂತರಾಷ್ಟ್ರೀಯ ಐತಿಹಾಸಿಕ ಮತ್ತು ಪವಿತ್ರ ಸ್ಥಳ. ಇಂಥ ಸ್ಥಳದಲ್ಲಿ ಈ ಒಂದು ಕಾರ್ಯವನ್ನು ಕೈಗೊಳ್ಳಲು ೧೫ ವರ್ಷಗಳಿಂದ ಉದಾಸೀನ ಮಾಡುತ್ತಿರುವುದು ಸರಿಯಲ್ಲ. ಕೇಂದ್ರ ಸರ್ಕಾರಕ್ಕೆ ಯಾವ ಸೈಟಿನ ಬಗ್ಗೆ ಬರೆದಿದ್ದೀರಿ ಮತ್ತು ನೀವು ಬರೆದಿರುವ ಪತ್ರದ ತಾರೀಖಿನ್ನು ಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ನನ್ನ ಹತ್ತಿರ ತಾರೀಖು ಇಲ್ಲ. ಹಿಂದೆ ನಾವು ಒಂದು ಸೈಟನ್ನು ಗೊತ್ತು ಮಾಡಿ ತೋರಿಸಿದಾಗ ಅದು ಆಗುವುದಿಲ್ಲವೆಂದರು. ಆದಕ್ಕೋಸ್ಕರ ನಾವು ಬೇರೊಂದು ಸೈಟನ್ನು ನೋಡಿ ಬರೆದಿದ್ದೇವೆ. ಅದನ್ನು ಅವರು ಒಪ್ಪಿದ್ದಾರೋ ಇಲ್ಲವೋ ಎಂಬ ಬಗ್ಗೆ ಇನ್ನು ತಿಳಿಸಿಲ್ಲ.

ಶ್ರೀ ಅಜೀಜ್ ಸೇಟ್.—ಬಿಜಾಪುರ, ಹುಬ್ಬಳ್ಳಿ, ರಾಯಚೂರು ಪ್ರದೇಶಗಳಿಗೆ ಅನುಕೂಲವಾಗುವ ಹಾಗೆ ಬಿಜಾಪುರದಲ್ಲಿ ಒಂದು ವಿಮಾನ ನಿಲ್ದಾಣವನ್ನು ನಿರ್ಮಿಸಬೇಕೆಂದು ಸರ್ಕಾರ ತೀರ್ಮಾನ ಕೈಗೊಂಡಿದೆಯಲ್ಲವೆ?

ಶ್ರೀ ಕಾಗೋಡು ತಿಮ್ಮಪ್ಪ.—ಹೌದು.

ಶ್ರೀ ವಿ.ವಿ. ಪತ್ತಾರ್.—ಒಂದು ವಿಮಾನ ನಿಲ್ದಾಣವನ್ನು ನಿರ್ಮಿಸುವ ಬಗ್ಗೆ ೧೫-೨೦ ವರ್ಷಗಳಾದರೂ ಒಂದು ತೀರ್ಮಾನ ತೆಗೆದುಕೊಳ್ಳದಿರುವುದು ಸರಿಯಾಗಿ ಕಾಣುವುದಿಲ್ಲ ಆದುದರಿಂದ, ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ತಾವೇ ಖುದ್ದಾಗಿ ಕೇಂದ್ರಕ್ಕೆ ಹೋಗಿ ವಿಷಯ ಈಗ ಯಾವ ಮಟ್ಟಕ್ಕೆ ಬಂದಿದೆ ಎಂಬುದನ್ನು ನೋಡಿ ಮುಂದಿನ ಕಾರ್ಯಕ್ರಮ ಕೈಗೊಳ್ಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ. ಅವರು ಅದನ್ನು ಅಭಿವೃದ್ಧಿಪಡಿಸಬೇಕೆಂದು ತೀರ್ಮಾನಿಸಿದ್ದರೆ ನಮಗೆ ತಿಳಿಸುತ್ತಿದ್ದರು. ನಾವು ಇದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇವೆ. ಅಂತೆಯೇ ಮಾಡುತ್ತಿದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—ಈ ನಿಲ್ದಾಣದ ಸಲುವಾಗಿ ೧೫ ವರ್ಷಗಳಿಂದ ಹೋರಾಡುತ್ತಿದ್ದೇವೆ. ೧೯೬೭-೬೮ರಲ್ಲಿ ಕೇಳಿದಾಗಲೂ ಇದೇ ಉತ್ತರ ಬಂದಿತ್ತು. ೧೯೭೮ರಲ್ಲಿ ಆಗಿನ ಲೋಕೋಪಯೋಗಿ ಮಂತ್ರಿಗಳು, ಈ ಯೋಜನೆಗಾಗಿ ಕೇಂದ್ರದವರು ೨ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ-ಇದು ಕೂಡಲೇ ಆಗುತ್ತದೆಂದವರು ಮತ್ತೆ ಕೇಂದ್ರ ಸರ್ಕಾರದವರು ದುಡ್ಡಿನ ತೊಂದರೆ ಇದೆಯೆಂದು ಹೇಳಿದ್ದಾರೆಂದರು. ಆಗ ನಾನು ಹೇಳಿದೆ, ನನ್ನನ್ನು ದೆಹಲಿಗೆ ಕರೆದುಕೊಂಡು ಹೋಗಿ, ನಾನು ೨ ಕೋಟಿ ರೂಪಾಯಿಗಳನ್ನು ಕೊಡಿಸುತ್ತೇನೆಂದು ಹೇಳಿದೆ. ಆದರೆ ಅವರು ಆ ಕೆಲಸ ಮಾಡಲಿಲ್ಲ. ಆದ್ದರಿಂದ, ತಾವಾದರೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಸಲುವಾಗಿ ಶಾಸಕಡ ನಿಯೋಗವನ್ನು ದೆಹಲಿಗೆ ಕಳುಹಿಸುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೆ ಪ್ರತ್ಯೇಕವಾಗಿ ಶಾಸಕರ ನಿಯೋಗ ಹೋಗಬೇಕಾದ ಅಗತ್ಯವಿಲ್ಲ. ಮಾನ್ಯ ಸದಸ್ಯರ ಜಿಲ್ಲೆಯಿಂದಲೇ ಹೋದಂತಹ ಲೋಕಸಭಾ ಸದಸ್ಯರು ಮತ್ತು ಮಂತ್ರಿಗಳು ದೆಹಲಿಯಲ್ಲಿದ್ದಾರೆ. ಕೇಂದ್ರದ ಮನ ಒಲಿಸುವ ಕೆಲಸವನ್ನು ಮಾಡುವುದಾದರೆ ನಮಗಿಂತ ಅವರೇ ಚನ್ನಾಗಿ ತಡ ಮಾಡದೆ ಮಾಡುತ್ತಾರೆ.

Number of bridges in the Raibhag Taluk

556 SRI R.S. NADONI (Raibhag).—Will the Minister for public Works be pleased to state.—

(a) the number of roads and extent of area taken-up from the year 1977 to 1981 in Raibhag taluk and number of bridges in the said roads;

(b) whether it has come to the notice of the Government that the local members had represented the Government regarding these roads.

(c) if so, measures taken by the Government?

SRI KAGODU THIMMAPPA (Minister for Public Works).—

(a) Three roads have been taken up under the control of Government in Raibhag taluk from 1977 to 1981. Exact length of these three roads is 34.50 K. M s. The work of one small bridge out of the two small bridges in between Alagadi and Chinchali Road, which is one among these three roads, has already been taken up and completed. Sanction has been accorded for taking up the work of another small bridge.

(b) Yes.